# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 9.85 ಕಿ.ಮೀ. ನಿಂದ ನೀರನ್ನು ಎತ್ತಿ ತಿಪಟೂರು ತಾಲ್ಲೂಕಿನ ಕಸಬಾ ಹೋಬಳಿಯ ಮಡೆನೂರು ಮತ್ತು ಇತರೆ ಆಯ್ದ 9 ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಯ ರೂ.36.50 ಕೋಟಿ ಮೊತ್ತದ ಅಂದಾಜಿನ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

*****

**ಓದಲಾಗಿದೆ :-**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿನಿ/ತಾಂತ್ರಿಕ-5/ನಾಗವಲ್ಲಿ/01/2019-20 ದಿನಾಂಕ:02.12.2020

**ಪ್ರಸ್ತಾವನೆ :-**

ಮೇಲೆ ಓದಲಾದ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರು, ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಮತ್ತು ಕಸಬಾ ಹೋಬಳಿ, ಅರಸೀಕೆರೆ, ಕಡೂರು ಮತ್ತು ಹೊಸದುರ್ಗ ತಾಲ್ಲೂಕಿನ ಆಯ್ದ ಗ್ರಾಮಗಳು ಮಳೆ ವೈಫಲ್ಯದಿಂದ ಹಾಗೂ ಅಂತರ್ಜಲ ಕುಸಿತದಿಂದ ಕುಡಿಯುವ ನೀರಿನ ಶಾಶ್ವತ ಆಸರೆ ಇಲ್ಲದೆ ಬರ ಪೀಡಿತವಾಗಿರುವುದನ್ನು ಗಮನಿಸಿ ಸರ್ಕಾರದ ಆದೇಶ ಸಂಖ್ಯೆ:ಜಸಂಇ 28 ಎನ್.ಹೆಚ್.ಪಿ 2008, ದಿನಾಂಕ:11.02.2009 ರಂತೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ಕಾಲುವೆ ಸರಪಳಿ 9.90 ಕಿ.ಮೀ. ನ ನಾಲೆಯಿಂದ 0.201 ಟಿ.ಎಂ.ಸಿ ನೀರನ್ನು ಬಳಸಿಕೊಂಡು ಈ ತಾಲ್ಲೂಕುಗಳ ಆಯ್ದ 24 ಕೆರೆಗಳಿಗೆ ಕುಡಿಯುವ ನೀರಿನ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು; ಅನುಮೋದಿತ ಯೋಜನೆಯಂತೆ ತಿಪಟೂರು ತಾಲ್ಲೂಕಿನ 17 ಕೆರೆಗಳಿಗೆ ಅರಸೀಕೆರೆ ತಾಲ್ಲೂಕಿನ 5 ಕೆರೆಗಳಿಗೆ, ಕಡೂರು ತಾಲ್ಲೂಕಿನ 1 ಕೆರೆ ಮತ್ತು ಹೊಸದುರ್ಗ ತಾಲ್ಲೂಕಿನ 1 ಕೆರೆಗೆ ನೀರು ಪೂರೈಸಲು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಯೋಜನೆಯು ಚಾಲನೆಯಲ್ಲಿದೆ; ತಿಪಟೂರು ತಾಲ್ಲೂಕಿನ ಮಾನ್ಯ ಶಾಸಕರು ಪ್ರಸ್ತುತ ಚಾಲ್ತಿಯಲ್ಲಿರುವ ಹೊನ್ನವಳ್ಳಿ ಏತ ನೀರಾವರಿ ಯೋಜನೆಯಲ್ಲಿ ಕೆಲವು ಮಾರ್ಪಾಡುಗಳೊಂದಿಗೆ, ತಿಪಟೂರು ತಾಲ್ಲೂಕಿನ ಕಸಬಾ ಹೋಬಳಿಯ ಮಡೆನೂರು ಮತ್ತು ಇತರೆ ಆಯ್ದ 9 ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಗೆ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.

2. ಮುಂದುವರೆದು, ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆಯ ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹೋಬಳಿ ಮತ್ತು ಕಸಬಾ ಹೋಬಳಿಯ ಆಯ್ದ 21 ಕೆರೆಗಳಿಗೆ ಹಾಗೂ ಹೆಚ್ಚುವರಿಯಾಗಿ ಸಾರ್ಥವಳ್ಳಿ ಕೆರೆಗೆ ಶೇಕಡ 60 ರಷ್ಟು (ಪ್ರಸ್ತುತ ಹಂಚಿಕೆಯಾಗಿರುವ ನೀರಿನ ಪ್ರಮಾಣ 93.20 ಎಂ.ಸಿ.ಎಫ್.ಟಿ. ಒಳಗೊಂಡಂತೆ) ಹೆಚ್ಚುವರಿಯಾಗಿ 220 ಎಂ.ಸಿ.ಎಫ್.ಟಿ. ನೀರನ್ನು ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಸಲುವಾಗಿ ಸರ್ಕಾರದ ಪತ್ರ ಸಂಖ್ಯೆ:ಜಸಂಇ 49 ಎನ್ ಹೆಚ್ ಪಿ 2019, ದಿನಾಂಕ:19.11.2019 ರಲ್ಲಿ ಹಂಚಿಕೆ ಮಾಡಲಾಗಿದ್ದು, ಅದರಂತೆ ಸದರಿ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ವರದಿ ಮಾಡಿರುತ್ತಾರೆ.

3. ಪ್ರಸ್ತಾಪಿತ ಯೋಜನೆಯನ್ನು ತಿಪಟೂರು ತಾಲ್ಲೂಕಿನ ಹೊಗವನಘಟ್ಟ ಗ್ರಾಮದ ಬಳಿ ಇರುವ ತುಮಕೂರು ಶಾಖಾ ನಾಲೆಯ ಸರಪಳಿ 9.85 ಕಿ.ಮೀ.ನಿಂದ ನೀರನ್ನು ಎತ್ತಿ ಮಡೆನೂರಿನಲ್ಲಿ ಈಗಾಗಲೇ ಇರುವ ಡೆಲಿವರಿ ಚೇಂಬರ್ ನ ಸರಪಳಿ 8.625 ಕಿ.ಮೀ. ವರೆಗೆ ಹೊಸದಾಗಿ ರೈಸಿಂಗ್ ಮೈನ್ 700 ಎಂ.ಎಂ. ವ್ಯಾಸದ 6 ಎಂ.ಎಂ. ದಪ್ಪದ ಎಂ.ಎಸ್.ಪೈಪ್ ಅನ್ನು ಅಳವಡಿಸಿ, ನೀರನ್ನು 90 ದಿನಗಳ ಕಾಲ 24 ಗಂಟೆಗಳಂತೆ 20.50 ಕ್ಯೂಸೆಕ್ಸ್ ನಂತೆ ಪೂರೈಸಲು ಯೋಜಿಸಿದೆ. ಸದರಿ ವ್ಯವಸ್ಥೆಯ ನೀರು ಎತ್ತುವ ಎತ್ತರ 75.00 ಮೀ. ಆಗಿದೆ.

4. ಸದರಿ ಯೋಜನೆಯ ಅಂದಾಜು ಪಟ್ಟಿಯನ್ನು ಜಲಸಂಪನ್ಮೂಲ ಇಲಾಖೆಯ 2018-19ನೇ ಸಾಲಿನ ದರಪಟ್ಟಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ 2018-19ನೇ ಸಾಲಿನ ದರಪಟ್ಟಿ, ಕರ್ನಾಟಕ ಒಳ ಚರಂಡಿ ಮತ್ತು ನೀರು ಸರಬರಾಜು ಇಲಾಖೆಯ 2018-19ನೇ ಸಾಲಿನ ದರಪಟ್ಟಿ,

ಬೆಸ್ಕಾಂ ಇಲಾಖೆಯ 2018-19ನೇ ಸಾಲಿನ ದರಪಟ್ಟಿ, ಮಾರುಕಟ್ಟೆಯ ದರಪಟ್ಟಿ ಮತ್ತು Ele MW SR-2017 ಗಳನ್ವಯ ರೂ.36.50 ಕೋಟಿಗಳಿಗೆ ತಯಾರಿಸಲಾಗಿದೆ.

5. ಸದರಿ ಪ್ರಸ್ತಾವನೆಯು ದಿನಾಂಕ:04.12.2019 ರಂದು ನಡೆದ ನಿಗಮದ 71ನೇ ಮಂಡಳಿಯ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡುತ್ತಾ, ರೂ.36.50 ಕೋಟಿ ಮೊತ್ತದ ಅಂದಾಜಿನ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

6. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 7 ಎನ್ ಹೆಚ್‌ಪಿ 2020,**
**ಬೆಂಗಳೂರು, ದಿನಾಂಕ:13.05.2021**

ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 9.85 ಕಿ.ಮೀ. ನಿಂದ ನೀರನ್ನು ಎತ್ತಿ ತಿಪಟೂರು ತಾಲ್ಲೂಕಿನ ಕಸಬಾ ಹೋಬಳಿಯ ಮಡೆನೂರು ಮತ್ತು ಇತರೆ ಆಯ್ದ 9 ಕೆರೆಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಯ, 2018-19ನೇ ಸಾಲಿನ ದರಪಟ್ಟಿ ಯನ್ವಯ ತಯಾರಿಸಲಾದ ರೂ.36.50 ಕೋಟಿ ಮೊತ್ತದ ಅಂದಾಜಿನ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 58 ಆಕೋ-1/2020(ಇ-ಆಫೀಸ್) ದಿನಾಂಕ:29.03.2021 ರಲ್ಲಿ ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 15 ಎಂಸಿಎಂ 2020 ಪಿಪಿಡಿ(ಇ-ಆಫೀಸ್) ದಿನಾಂಕ:10.09.2020 ರಲ್ಲಿ ನೀಡಲಾದ ಸಹಮತಿಗಳನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

13/05/2021

**( ಮನೋಹರ ವೈ. ರೊಟ್ಟೆ )**
**ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)**
**ಜಲಸಂಪನ್ಮೂಲ ಇಲಾಖೆ**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-157/2021, ದಿನಾಂಕ:26.04.2021)
6. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++